ಉದಯವಾಣಿ
ಕನ್ನಡ ದಿನಪತ್ರಿಕೆ

Sunday, April 11th, 2010

# ಆರ್. ಚೆನ್‌ರಾಜ್ ಜೈನ್‌ಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ



**ಬೆಂ**ಗಳೂರಿನ ಜೈನ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಸ್ಥಾಪಕಾಧ್ಯಕ್ಷ ಆರ್. ಚೆನ್‌ರಾಜ್ ಜೈನ್ ಅವರಿಗೆ ಮಂಗಳೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪದವಿ ನೀಡಿದೆ. ಇತ್ತೀಚೆಗೆ ಮಂಗಳೂರು ವಿವಿಯಲ್ಲಿ ನಡೆದ ಘಟಿಕೋತ್ಸವದಲ್ಲಿ ಕೇಂದ್ರದ ವಿದೇಶಾಂಗ ವ್ಯವಹಾರ ರಾಜ್ಯ ಸಚಿವ ಡಾ. ಶಶಿ ತರೂರು ಪದವಿ ಪ್ರದಾನ ಮಾಡಿದರು. ಆರ್. ಚೆನ್ ರಾಜ್ ಅವರ ಶೈಕ್ಷಣಿಕ ಮತ್ತು ಸಾಮಾಜಿಕ ಸೇವೆಗಳನ್ನು ಪರಿಗಣಿಸಿ ಈ ಪದವಿ ನೀಡಲಾಗಿದೆ.

ಆರ್. ಚೆನ್‌ರಾಜ್ ಜೈನ್ 'JGI life' ಸಾಮಾಜಿಕ ಸೇವಾ ಸಂಘಟನೆಯ ಮೂಲಕ ಸಮುದಾಯಕ್ಕೆ ಅಗತ್ಯವಿರುವ ಅನೇಕ ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯ ನಿರ್ವಹಿಸುತ್ತಿದ್ದಾರೆ. 'ಕ್ಯಾಟರಾಕ್ಟ್ ಫ್ರಿ ಕನಕಪುರ' ಪ್ರಾಜೆಕ್ಟ್, 'ಸ್ಕೂಲ್ ಐ ಸ್ಕ್ರೀನಿಂಗ್' ಪ್ರಾಜೆಕ್ಟ್, ನೇತ್ರದಾನ ಶಿಬಿರ, ಸ್ವಯಂಪ್ರೇರಿತ ರಕ್ತದಾನ ಶಿಬಿರ, ಪ್ರಕೃತಿ ವಿಕೋಪ ಪರಿಹಾರ,ಪರಿಸರ ಜಾಗೃತಿ ಕಾರ್ಯಕ್ರಮ ಮುಂತಾದ ಯೋಜನೆಗಳ ಮೂಲಕ ಸಾಮಾಜಿಕ ಕಾರ್ಯಗಳನ್ನು ನಡೆಸುತ್ತಿದ್ದಾರೆ. ಸುಮಾರು 20,000ಕ್ಕೂ ಹೆಚ್ಚು ಕ್ಯಾಟರಾಕ್ಟ್ ಶಸ್ತ್ರಚಿಕಿತ್ಸೆಗಳನ್ನು ಆಯೋಜಿಸಿರುತ್ತಾರೆ. 'ಜೈನ್ ವಿದ್ಯಾನಿಕೇತನ್' ಶಿಕ್ಷಣ ಸಂಸ್ಥೆಯ ಮೂಲಕ ಕನಕಪುರ ತಾಲೂಕಿನ ಬಡ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾಭ್ಯಾಸ ನೀಡುತ್ತಿರುವ ಇವರು ಶಿಕ್ಷಣ ಪರಿಕರಗಳಾದ ಪುಸ್ತಕ, ಸಮವಸ್ತ್ರ ಊಟ ವಸತಿ ಮುಂತಾದ ವ್ಯವಸ್ಥೆಗಳನ್ನು ಉಚಿತವಾಗಿ ನೀಡುತ್ತಿದ್ದಾರೆ.